**All India Radio: Bangalore**
**National Bulletin In Kannada**
**13.10.2026 1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**13.10.2026 1.10 pm**

**<><><*><><<>**

ಮುಖ್ಯಾಂಶಗಳು

**೧. ಸಾಮೂಹಿಕ ಬೆಳವಣಿಗೆ ಮತ್ತು ಸಮಾನ ಅವಕಾಶವೇ ಭಾರತದ ಪ್ರಗತಿಗೆ ಆಧಾರ - ಪ್ರಧಾನಿ ನರೇಂದ್ರ ಮೋದಿ**

**೨. ಬಿಮ್‌ಸ್ಟೆಕ್ ರಾಷ್ಟ್ರಗಳ ಮೊದಲ ಗೃಹ ಸಚಿವರ ಸಭೆ ನವದೆಹಲಿಯಲ್ಲಿ ಆರಂಭ**

**೩. ಕೆನಡಾ ವಿದೇಶಾಂಗ ಸಚಿವೆ ಅನಿತಾ ಆನಂದ್ ಇಂದಿನಿಂದ ಎರಡು ದಿನಗಳ ಭಾರತ ಪ್ರವಾಸ**

**೪. ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್; ವಿವಿಧ ವಿಭಾಗಗಳಲ್ಲಿಂದು ಭಾರತದ ಶಟ್ಲರ್‌ಗಳು ಕಣದಲ್ಲಿ**

**<><><*><><<>**

ಭಾರತದ ಪ್ರಗತಿಯು ಸಾಮೂಹಿಕ ಬೆಳವಣಿಗೆ ಮತ್ತು ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸುವುದರ ಮೇಲೆ ಆಧಾರಿತವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ಬ್ಲೂಮ್‌ಬರ್ಗ್ ನೂತನ ಆರ್ಥಿಕತೆ ವೇದಿಕೆಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಆಡಳಿತ ವಿಧಾನ ಮತ್ತು ಕಾರ್ಯ ಸಂಸ್ಕೃತಿಯಲ್ಲಿ ಸಬಲೀಕರಣಕ್ಕಾಗಿ ಅಧಿಕಾರ ಎಂಬ ತತ್ವವನ್ನು ಅಳವಡಿಸಿಕೊಂಡಿದೆ ಎಂದರು. ಅಧಿಕಾರ ಎಂದರೆ ಮುಂದೆ ಸಾಗುವ ಸಾಮರ್ಥ್ಯ ಮಾತ್ರವಲ್ಲ, ಇತರರನ್ನೂ ಸಬಲಗೊಳಿಸುವ ಶಕ್ತಿಯಾಗಿದೆ. ಇಂದಿನ ಯುಗದಲ್ಲಿ ಡಿಜಿಟಲ್ ಶಕ್ತಿಯು ಈ ಪರಿವರ್ತನೆಯ ಪ್ರಮುಖ ಚಾಲಕಶಕ್ತಿಗಳಲ್ಲಿ ಒಂದಾಗಿದ್ದು, ಭಾರತಕ್ಕೆ ಹೆಚ್ಚಿನ ಅವಕಾಶಗಳನ್ನು ತೆರೆದಿದೆ ಎಂದು ಪ್ರಧಾನಿ ಹೇಳಿದರು. ತಂತ್ರಜ್ಞಾನ, ದತ್ತಾಂಶ, ಜ್ಞಾನ ಮತ್ತು ನಾವೀನ್ಯತೆಗಳು ೨೧ನೇ ಶತಮಾನದಲ್ಲಿ ಶಕ್ತಿಯ ಪ್ರಮುಖ ಮೂಲಗಳಾಗಿವೆ. ಭಾರತದ ಸಾಮರ್ಥ್ಯಗಳು ಇತರ ದೇಶಗಳಿಗೂ ಹೊಸ ಅವಕಾಶಗಳ ಬಾಗಿಲು ತೆರೆಯುವಂತೆ ಮಾಡುವುದು ಸರ್ಕಾರದ ನಿರಂತರ ಪ್ರಯತ್ನವಾಗಿದೆ ಎಂದರು. ಕಳೆದ ಒಂದು ದಶಕದಲ್ಲಿ ೨೫ ಕೋಟಿ ಜನರನ್ನು ಬಡತನದಿಂದ ಹೊರತರಲಾಗಿದೆ. ೨೦೧೪ರಿಂದ ದೇಶದ ನವೋದ್ಯಮ ವಲಯ ಗಣನೀಯವಾಗಿ ವಿಸ್ತರಿಸಿದ್ದು, ನವೋದ್ಯಮಗಳ ಸಂಖ್ಯೆ ೨.೫ ಲಕ್ಷ ದಾಟಿದೆ. ಇವುಗಳಲ್ಲಿ ಶೇಕಡಾ ೪೫ಕ್ಕೂ ಅಧಿಕ ನವೋದ್ಯಮಗಳಲ್ಲಿ ಕನಿಷ್ಠ ಒಬ್ಬ ಮಹಿಳಾ ನಿರ್ದೇಶಕಿ ಅಥವಾ ಪಾಲುದಾರರು ಇದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

**<><><*><><<>**

ಭಾರತದ ಆತಿಥ್ಯದಲ್ಲಿ ಬಿಮ್‌ಸ್ಟೆಕ್ ರಾಷ್ಟ್ರಗಳ ಮೊದಲ ಗೃಹ ಸಚಿವರ ಸಭೆ ನವದೆಹಲಿಯಲ್ಲಿ ಆರಂಭಗೊಂಡಿದೆ. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಭಯೋತ್ಪಾದನೆ, ಗಡಿಯಾಚೆಗಿನ ಸಂಘಟಿತ ಅಪರಾಧಗಳು, ಮಾದಕವಸ್ತು ಕಳ್ಳಸಾಗಣೆ, ಮೂಲಭೂತವಾದ, ಅಕ್ರಮ ಹಣಕಾಸು ಹರಿವು ಹಾಗೂ ಸೈಬರ್ ಬೆದರಿಕೆಗಳನ್ನು ಜಂಟಿಯಾಗಿ ಎದುರಿಸಲು ಈ ಸಭೆಯು ಎಲ್ಲ ರಾಷ್ಟ್ರಗಳ ದೃಢಸಂಕಲ್ಪವನ್ನು ಬಿಂಬಿಸುತ್ತದೆ ಎಂದು ತಿಳಿಸಿದರು. ದೃಢವಾದ ಸಮನ್ವಯತೆಯ ಮೂಲಕ ಹೆಚ್ಚು ಸುರಕ್ಷಿತ ಮತ್ತು ಬಲವಾದ

ಬಿಮ್‌ಸ್ಟೆಕ್ ಪ್ರದೇಶವನ್ನು ನಿರ್ಮಿಸಲು ಎಲ್ಲ ಸದಸ್ಯ ರಾಷ್ಟ್ರಗಳು ಬದ್ಧವಾಗಿವೆ ಎಂದು ಅವರು ಪ್ರತಿಪಾದಿಸಿದರು. ೧೯೯೭ರಲ್ಲಿ ಸ್ಥಾಪನೆಯಾದ ಬಿಮ್‌ಸ್ಟೆಕ್ ಸಂಘಟನೆಯಲ್ಲಿ ಭಾರತ, ಬಾಂಗ್ಲಾದೇಶ, ಭೂತಾನ್, ಮ್ಯಾನ್ಮಾರ್, ನೇಪಾಳ, ಶ್ರೀಲಂಕಾ ಮತ್ತು ಥಾಯ್ಲೆಂಡ್ ಸೇರಿದಂತೆ ಏಳು ರಾಷ್ಟ್ರಗಳು ಸದಸ್ಯರಾಗಿವೆ. ಬಂಗಾಳ ಕೊಲ್ಲಿ ಪ್ರದೇಶದ ರಾಷ್ಟ್ರಗಳ ನಡುವೆ ಆರ್ಥಿಕ ಮತ್ತು ತಾಂತ್ರಿಕ ಸಹಕಾರವನ್ನು ಉತ್ತೇಜಿಸುವುದು ಸಂಘಟನೆಯ ಪ್ರಮುಖ ಉದ್ದೇಶವಾಗಿದೆ.

**<><><*><><<>**

ಕೆನಡಾ ವಿದೇಶಾಂಗ ಸಚಿವೆ ಅನಿತಾ ಆನಂದ್ ಇಂದಿನಿಂದ ಎರಡು ದಿನಗಳ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ. ಅವರ ಭೇಟಿಯ ಸಮಯದಲ್ಲಿ ನಾಳೆ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್. ಜೈಶಂಕರ್ ಮತ್ತು ಕೌಶಲ್ಯಾಭಿವೃದ್ಧಿ ಹಾಗೂ ಉದ್ಯಮಶೀಲತೆ ಸಚಿವ ಜಯಂತ್ ಚೌಧರಿ ಅವರನ್ನು ಭೇಟಿ ಮಾಡಲಿದ್ದಾರೆ. ಭಾರತದಲ್ಲಿನ ಕೆನಡಾ ಹೈಕಮಿಷನರ್ ಕ್ರಿಸ್ಟೋಫರ್ ಕೂಟರ್ ಮಾತನಾಡಿ, ಪ್ರಸ್ತಾವಿತ ಮುಕ್ತ ವ್ಯಾಪಾರ ಒಪ್ಪಂದ, ಹೆಚ್ಚಿನ ಹೂಡಿಕೆ ಮತ್ತು ಉಭಯ ದೇಶಗಳ ನಡುವೆ ಜನರ ಸಂಚಾರ ಹೆಚ್ಚಿಸುವ ಮೂಲಕ ದ್ವಿಪಕ್ಷೀಯ ವ್ಯಾಪಾರವನ್ನು ಬಲಪಡಿಸಲು ಕೆನಡಾ ಎದುರು ನೋಡುತ್ತಿದೆ ಎಂದು ತಿಳಿಸಿದ್ದಾರೆ. ಭಾರತ ಮತ್ತು ಕೆನಡಾ ನಡುವಿನ ಪ್ರವಾಸೋದ್ಯಮ ಕ್ಷೇತ್ರದಲ್ಲಿಯೂ ಬೆಳವಣಿಗೆಗೆ ಹೆಚ್ಚಿನ ಅವಕಾಶಗಳಿವೆ ಎಂದು ಅವರು ಹೇಳಿದ್ದಾರೆ.

**<><><*><><<>**

ಅರ್ಹ ಪ್ರತಿಯೊಬ್ಬ ನಾಗರಿಕರ ಹೆಸರನ್ನೂ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವ ಉದ್ದೇಶದಿಂದ ಭಾರತ ಚುನಾವಣಾ ಆಯೋಗ ಹಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಶೇಷ ಶಿಬಿರಗಳು ಹಾಗೂ ಮತದಾರರ ನೆರವು ಅಭಿಯಾನಗಳನ್ನು ತೀವ್ರಗೊಳಿಸಿದೆ. ಮುಖ್ಯ ಚುನಾವಣಾಧಿಕಾರಿಗಳು ಮತ್ತು ಜಿಲ್ಲಾ ಚುನಾವಣಾಧಿಕಾರಿಗಳು ಮತದಾರರ ಹೆಸರು ನೋಂದಣಿ, ವೈಯಕ್ತಿಕ ವಿವರಗಳ ತಿದ್ದುಪಡಿ ಹಾಗೂ ಮತದಾರರ ಪಟ್ಟಿಯಲ್ಲಿನ ಲೋಪದೋಷಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳುತ್ತಿದ್ದಾರೆ. ಮತಗಟ್ಟೆಗಳಲ್ಲಿ ವಿಶೇಷ ಶಿಬಿರಗಳನ್ನು ಆಯೋಜಿಸಲಾಗುತ್ತಿದ್ದು, ಮತದಾರರು ಬೂತ್ ಮಟ್ಟದ ಅಧಿಕಾರಿಗಳು ಸೇರಿದಂತೆ ಸಂಬಂಧಪಟ್ಟ ಚುನಾವಣಾ ಅಧಿಕಾರಿಗಳನ್ನು ಸಂಪರ್ಕಿಸಿ ನೆರವು ಪಡೆಯಬಹುದು. ಮತದಾರರ ನೋಂದಣಿ, ವಿಚಾರಣೆ ಪ್ರಕ್ರಿಯೆ ಹಾಗೂ ದಾಖಲೆಗಳಲ್ಲಿನ ವ್ಯತ್ಯಾಸಗಳಿಗೆ ಸಂಬಂಧಿಸಿದ ದೂರುಗಳ ಪರಿಹಾರಕ್ಕೂ ಈ ಅಭಿಯಾನ ಆದ್ಯತೆ ನೀಡಲಿದೆ.

**<><><*><><<>**

ದೇಶದಲ್ಲಿ ಅಂತರ್ಜಾಲ ಬಳಕೆದಾರರ ಸಂಖ್ಯೆ ೨೦೨೬ರ ಮಾರ್ಚ್ ಅಂತ್ಯದಿಂದ ೧೦೯ ಕೋಟಿ ೨೮ ಲಕ್ಷದಿಂದ ಜೂನ್ ಅಂತ್ಯಕ್ಕೆ ೧೧೧ ಕೋಟಿ ೪೧ ಲಕ್ಷಕ್ಕೂ ಅಧಿಕವಾಗಿ ಏರಿಕೆಯಾಗಿದೆ. ತ್ರೈಮಾಸಿಕ ಅವಧಿಯಲ್ಲಿ ಶೇಕಡಾ ೧.೯೬ರಷ್ಟು ಬೆಳವಣಿಗೆ ದಾಖಲಾಗಿದೆ. ಒಟ್ಟು ಅಂತರ್ಜಾಲ ಬಳಕೆದಾರರಲ್ಲಿ ೪ ಕೋಟಿ ೭೭ ಲಕ್ಷಕ್ಕೂ ಅಧಿಕ ಮಂದಿ ವೈರ್ಡ್ ಸಂಪರ್ಕ ಹೊಂದಿದ್ದರೆ, ಸುಮಾರು ೧೦೬ ಕೋಟಿ ೬೪ ಲಕ್ಷ ಮಂದಿ ವೈರ್‌ಲೆಸ್ ಸಂಪರ್ಕ ಬಳಸುತ್ತಿದ್ದಾರೆ. ಜೂನ್ ಅಂತ್ಯಕ್ಕೆ ಬ್ರಾಡ್‌ಬ್ಯಾಂಡ್ ಬಳಕೆದಾರರ ಸಂಖ್ಯೆ ಶೇಕಡಾ ೨.೦೩ರಷ್ಟು ಹೆಚ್ಚಿದ್ದರೆ, ನ್ಯಾರೋಬ್ಯಾಂಡ್ ಬಳಕೆದಾರರ ಸಂಖ್ಯೆ ಶೇಕಡಾ ೦.೮೯ರಷ್ಟು ಇಳಿಕೆಯಾಗಿದೆ ಎಂದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ ತಿಳಿಸಿದೆ. ಇದೇ ಅವಧಿಯಲ್ಲಿ ದೇಶದ ದೂರವಾಣಿ ಬಳಕೆದಾರರ ಸಂಖ್ಯೆ ಮಾರ್ಚ್ ಅಂತ್ಯದ ಸುಮಾರು ೧೩೩ ಕೋಟಿಯಿಂದ ಜೂನ್ ಅಂತ್ಯಕ್ಕೆ ೧೩೪ ಕೋಟಿಗೆ ಏರಿಕೆಯಾಗಿದೆ. ತ್ರೈಮಾಸಿಕ ಬೆಳವಣಿಗೆ ಶೇಕಡಾ ೧.೩೧ರಷ್ಟಿದೆ. ದೇಶದ ಒಟ್ಟಾರೆ ಟೆಲಿಡೆನ್ಸಿಟಿ ಪ್ರಮಾಣವೂ ಶೇಕಡಾ ೯೩.೨೬ರಿಂದ ಶೇಕಡಾ ೯೪.೩೧ಕ್ಕೆ ಏರಿಕೆಯಾಗಿದೆ.

<>><><*><><<>

’ಜನ ಸೇವೆಯಿಂದ ದೇಶ ಸೇವೆ’ ಎಂಬ ಮಂತ್ರದಡಿ ಜನರ ಏಳಿಗೆಯ ಅಚಲ ಬದ್ಧತೆಯೊಂದಿಗೆ, ಸಾರ್ವಜನಿಕ ಸೇವೆಯ ೨೫ ವರ್ಷಗಳ ಪಯಣವನ್ನು ಪ್ರಧಾನಿ ನರೇಂದ್ರ ಮೋದಿ ಪೂರೈಸಿದ್ದಾರೆ. ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ ’ವಿಕಸಿತ ಭಾರತ’ ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ ಸಾಗರಮಾಲಾ ಯೋಜನೆ ಕುರಿತ ಒಂದು ವರದಿ ಇಲ್ಲಿದೆ. ೨೦೧೫ರಲ್ಲಿ ಪ್ರಾರಂಭವಾದ ’ಸಾಗರಮಾಲಾ’ ಯೋಜನೆಯು ದೇಶದ ಕರಾವಳಿಯನ್ನು ಉತ್ಪಾದನೆ, ಮಾರುಕಟ್ಟೆ ಹಾಗೂ ಜನಜೀವನದೊಂದಿಗೆ ಬೆಸೆಯುವ ಮೂಲಕ ಆರ್ಥಿಕ ಪ್ರಗತಿಯ ಪ್ರಮುಖ ಚಾಲಕಶಕ್ತಿಯಾಗಿ ಪರಿವರ್ತಿಸುವ ಗುರಿ ಹೊಂದಿದೆ. ಬಂದರು ಆಧುನಿಕರಣ, ರಸ್ತೆ ಮತ್ತು ರೈಲು ಸಂಪರ್ಕ, ಬಂದರು ಆಧಾರಿತ ಕೈಗಾರೀಕರಣ, ಕರಾವಳಿ ಸಮುದಾಯಗಳ ಅಭಿವೃದ್ಧಿ ಹಾಗೂ ಒಳನಾಡಿನ ಜಲಸಾಗಾಣಿಕೆಯಂತಹ ಐದು ಪ್ರಮುಖ ಸ್ತಂಭಗಳ ಮೇಲೆ ಈ ಯೋಜನೆ ಕಾರ್ಯನಿರ್ವಹಿಸುತ್ತಿದೆ. ಈ ಮಹತ್ವಾಕಾಂಕ್ಷೆಯ ಯೋಜನೆಯಡಿ ಒಟ್ಟು ೬.೦೬ ಲಕ್ಷ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ೮೪೫ಕ್ಕೂ ಹೆಚ್ಚು ಯೋಜನೆಗಳನ್ನು ಗುರುತಿಸಲಾಗಿದ್ದು, ಈಗಾಗಲೇ ೩೧೫ ಯೋಜನೆಗಳು ಪೂರ್ಣಗೊಂಡಿವೆ. ಪ್ರಮುಖ ಬಂದರುಗಳಲ್ಲಿ ಹಡಗುಗಳ ನಿಲುಗಡೆ ಅವಧಿಯು ೨೦೧೪ರಲ್ಲಿದ್ದ ೯೬ ಗಂಟೆಗಳಿಂದ ೨೦೨೫ರ ವೇಳೆಗೆ ಸುಮಾರು ೪೯ ಗಂಟೆಗಳಿಗೆ ಇಳಿಕೆಯಾಗಿದೆ. ಇಂದು ವಿಶ್ವದ ಅಗ್ರ ೧೦೦ ಬಂದರುಗಳ ಪಟ್ಟಿಯಲ್ಲಿ ಭಾರತದ ಒಂಬತ್ತು ಬಂದರುಗಳು ಸ್ಥಾನ ಪಡೆದಿವೆ. ದೇಶದ ಶೇಕಡ ೯೫ರಷ್ಟು ವ್ಯಾಪಾರ ಕಡಲ ಮಾರ್ಗದ ಮೂಲಕವೇ ನಡೆಯುತ್ತಿದ್ದು, ೨೦೧೪ರಲ್ಲಿ ೮೭೩ ದಶಲಕ್ಷ ಟನ್‌ಗಳಷ್ಟಿದ್ದ ಪ್ರಮುಖ ಬಂದರುಗಳ ಸಾಮರ್ಥ್ಯ ೨೦೨೬ಕ್ಕೆ ೧ ಸಾವಿರದ ೭೨೮ ದಶಲಕ್ಷ ಟನ್‌ಗಳಿಗೆ ದ್ವಿಗುಣಗೊಂಡಿದೆ.

<>><><*><><<>

ರಕ್ಷಣಾ ವಲಯದ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ದೇಶೀಯ ನಾವೀನ್ಯತೆಯನ್ನು ಉತ್ತೇಜಿಸುವ ಉದ್ದೇಶದಿಂದ, ಭಾರತೀಯ ತಂತ್ರಜ್ಞಾನ ಸಂಸ್ಥೆ ಮದ್ರಾಸ್‌ನ ತಂತ್ರಜ್ಞಾನ ನಾವೀನ್ಯತಾ ಕೇಂದ್ರವಾದ ’ಪ್ರವರ್ತಕ್ ಟೆಕ್ನಾಲಜೀಸ್ ಫೌಂಡೇಶನ್’, ಹೈದರಾಬಾದ್ ಮೂಲದ ರಕ್ಷಣಾ ಕೃತಕ ಬುದ್ಧಿಮತ್ತೆ ಕಂಪನಿಯಾದ ’ಮೇಧಾಸ್ತ್ರ ಟೆಕ್‌ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್’ ಜೊತೆಗೆ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿದೆ. ಐಐಟಿ ಮದ್ರಾಸ್‌ನ ನಿರ್ದೇಶಕ ಪ್ರೊ. ವಿ. ಕಾಮಕೋಟಿ ಮತ್ತು ಪ್ರವರ್ತಕ್‌ನ ಸಿಇಒ ಡಾ. ಎಂ. ಜೆ. ಶಂಕರ್ ರಾಮನ್ ಅವರ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು.

<>><><*><><<>

ಡೆನ್ಮಾರ್ಕ್‌ನ ಒಡೆನ್ಸ್‌ಯಲ್ಲಿ ಇಂದಿನಿಂದ ಪ್ರತಿಷ್ಠಿತ ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಗೆ ಚಾಲನೆ ದೊರೆಯಲಿದ್ದು, ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿಂದು ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಭಾರತದ ಪಿ.ವಿ. ಸಿಂಧು ಜರ್ಮನಿಯ ಯೆವಾನ್ ಲಿ ಅವರನ್ನು ಎದುರಿಸಲಿದ್ದಾರೆ. ಇದೇ ವಿಭಾಗದ ಮತ್ತೊಂದು ಪಂದ್ಯದಲ್ಲಿ ಭಾರತದ ಉದಯೋನ್ಮುಖ ಆಟಗಾರ್ತಿ ತನ್ವಿ ಶರ್ಮಾ ಜಪಾನ್‌ನ ನತ್ಸುಕಿ ನಿದಾಯ್‌ರಾ ಅವರೊಂದಿಗೆ ಸೆಣಸಲಿದ್ದಾರೆ. ಭಾರತದ ಅಶ್ಮಿತಾ ಚಲಿಹಾ, ದೇವಿಕಾ ಸಿಹಾಗ್ ಹಾಗೂ ಉನ್ನತಿ ಹೂಡಾ ನಾಳೆ ನಡೆಯಲಿರುವ ಪ್ರೀ-ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಕಣಕ್ಕಿಳಿಯಲಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯಗಳಲ್ಲಿ ಇಂದು ಭಾರತದ ಲಕ್ಷ್ಯ ಸೇನ್ ಹಾಗೂ ಮಾಜಿ ವಿಶ್ವ ಅಗ್ರ ಶ್ರೇಯಾಂಕಿತ ಕಿಡಂಬಿ ಶ್ರೀಕಾಂತ್ ಸ್ಪರ್ಧಿಸುತ್ತಿದ್ದಾರೆ. ಆಯುಷ್ ಶೆಟ್ಟಿ ಅವರ ಪಂದ್ಯ ನಾಳೆ ನಿಗದಿಯಾಗಿದೆ. ಇನ್ನು ಪುರುಷರ ಡಬಲ್ಸ್

ವಿಭಾಗದ ಆರಂಭಿಕ ಸುತ್ತಿನಲ್ಲಿ ಭಾರತದ ಅಗ್ರ ಜೋಡಿ ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ, ನಾಳೆ ಕಣಕ್ಕಿಳಿಯಲಿದ್ದಾರೆ.

**<>><><*><><<>**

ನವದೆಹಲಿ ರಾಜಧಾನಿ ಪ್ರದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯ ಹಿನ್ನೆಲೆಯಲ್ಲಿ ದೆಹಲಿ ಸಂಚಾರ ಪೊಲೀಸರು ಇಂದು ಸಂಚಾರ ಸಲಹೆ ಪ್ರಕಟಿಸಿದ್ದಾರೆ. ದಿನವಿಡೀ ರಾಜಧಾನಿಯ ವಿವಿಧ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಅಡಚಣೆಯಾಗುವ ಸಾಧ್ಯತೆಯಿದ್ದು, ಪರಿಸ್ಥಿತಿಗೆ ಅನುಗುಣವಾಗಿ ಪ್ರಮುಖ ಜಂಕ್ಷನ್‌ಗಳು ಮತ್ತು ರಸ್ತೆಗಳಲ್ಲಿ ಸಂಚಾರ ಮಾರ್ಗ ಬದಲಾವಣೆ ಜಾರಿಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

**<>><><*><><<>**

ಜಮ್ಮು-ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ನಿಯಂತ್ರಣ ರೇಖೆಯ ಮೂಲಕ ಒಳನುಸುಳಲು ಯತ್ನಿಸುತ್ತಿದ್ದ ಲಷ್ಕರ್-ಎ-ತೈಬಾ ಸಂಘಟನೆಯ ಪ್ರಮುಖ ಕಮಾಂಡರ್ ಸೇರಿದಂತೆ ನಾಲ್ವರು ಉಗ್ರರು ನಿನ್ನೆ ನೆಲಬಾಂಬ್ ಸ್ಫೋಟದಲ್ಲಿ ಮೃತಪಟ್ಟಿದ್ದಾರೆ. ಕೃಷ್ಣ ಘಾಟಿ ವಲಯದ ನಾಗೀ ಟಕ್ರಿ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಮೃತರನ್ನು ಲಷ್ಕರ್-ಎ-ತೈಬಾ ಕಮಾಂಡರ್ ಮೊಹಮ್ಮದ್ ಫೈಜಾನ್, ಮೊಹಮ್ಮದ್ ಇಷ್ತಿಯಾಕ್, ಮೊಹಮ್ಮದ್ ವಕಾಸ್ ಮತ್ತು ಮೊಹಮ್ಮದ್ ಆಸಿಮ್ ಎಂದು ಗುರುತಿಸಲಾಗಿದೆ. ಇವರೆಲ್ಲರೂ ಪಾಕಿಸ್ತಾನ ಆಕ್ರಮಿತ ಜಮ್ಮು-ಕಾಶ್ಮೀರದ ಪೂಂಚ್ ಜಿಲ್ಲೆಯ ಹಜೀರಾ ತಹಸಿಲ್‌ನ ಮಂಡ್ಲಾ, ಮದರ್‌ಪುರ ನಿವಾಸಿಗಳೆಂದು ತಿಳಿದುಬಂದಿದೆ. ಗಡಿಯಾಚೆಯಿಂದ ಉಗ್ರರು ಒಳನುಸುಳಲು ಬಳಸುವ ಮಾರ್ಗದಲ್ಲಿ ಈ ಸ್ಫೋಟ ಸಂಭವಿಸಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧.೩೦ ಕ್ಕೆ ><><<>**